
# ನಿಮ್ಮೊಡನೆ

‘ಮನೆ ಮನೆಯಲಿ ದೀಪವುರಿಸಿ, ಹೊತ್ತುಹೊತ್ತಿಗೆ ಅನ್ನವುಣಿಸಿ, ತಂದೆ ಮಗುವ ತಬ್ಬಿದಾಕೆ, ನಿನಗೆ ಬೇರೆ ಹೆಸರು ಬೇಕೆ, ಸ್ತ್ರೀ ಎಂದರೆ ಅಷ್ಟೇ ಸಾಕೆ’ ಎಂದು ತಮ್ಮ ಕವನವೊಂದರಲ್ಲಿ ಕೇಳಿದ್ದರು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು. ‘ಹೌದು ಬೇರೆ ಹೆಸರು ಬೇಕು’ ಎಂದು ಕೇಳುತ್ತಿದ್ದಾರೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಕೃಷ್ಣಾ ತೀರಥ್.




## ‘ಗೃಹಿಣಿ’ ಎಂದರೆ ಅಷ್ಟೆ ಸಾಕೆ?!

‘ಏನು ಕೆಲಸ ಮಾಡುತ್ತಿದ್ದೀರಿ’ ಎಂದರೆ ಬಹಳಷ್ಟು ಗೃಹಿಣಿಯರು ನೀಡುವ ಉತ್ತರ ‘ಏನೂ ಇಲ್ಲ. ಮನೇಲಿದ್ದೇನೆ’. ಎಂದರೆ, ಏನೂ ಕೆಲಸವಿಲ್ಲದೆ ಮನೆಯಲ್ಲಿ ಖಾಲಿ ಕೂತಿರುತ್ತಾರೆಯೆ ಗೃಹಿಣಿಯರು? ಖಂಡಿತಾ ಅಲ್ಲ. ಬೆಳಿಗ್ಗೆ ಮನೆಯವರೆಲ್ಲರಿಗಿಂತ ಮೊದಲೇ ಎದ್ದು ಮನೆಗೆಲಸ ಶುರು ಮಾಡಿದರೆ ಆಕೆ ಮಲಗುವುದು ಮನೆಯವರೆಲ್ಲಾ ಹಾಸಿಗೆ ಸೇರಿದ ನಂತರವೇ ಎಂಬುದು ಎಲ್ಲರಿಗೂ ತಿಳಿದ ಸತ್ಯ. ಹೊತ್ತು, ಹೊತ್ತಿಗೆ ಊಟ –ತಿಂಡಿ ಸಿದ್ಧಪಡಿಸುವುದು, ತೊಳೆಯುವುದು– ಬಳಿಯುವುದು, ಮಕ್ಕಳ– ಹಿರಿಯರ ಆರೈಕೆ, ಮಕ್ಕಳಿಗೆ ಪಾಠ ಹೇಳುವುದು, ದಿನಸಿ, ತರಕಾರಿ ಇತ್ಯಾದಿ ಆಹಾರ ಪದಾರ್ಥ ಹೊಂದಿಸುವುದು– ಹೀಗೆ ಗೃಹಿಣಿಯ ಕೆಲಸದ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮನೆಗೆಲಸಕ್ಕೆ ಯಾವ ವಾರದ ರಜೆಯೂ ಇಲ್ಲ; ನಿವೃತ್ತಿಯೂ ಇಲ್ಲ. ಹೀಗಿದ್ದೂ ‘ನಾನೇನೂ ಕೆಲಸ ಮಾಡುತ್ತಿಲ್ಲ’ ಎಂಬಂತಹ ಮಾತುಗಳನ್ನೇಕೆ ನಾವು ಸಹಜವಾಗಿ ಸ್ವೀಕರಿಸುತ್ತೇವೆ? ಮನೆಗೆಲಸಕ್ಕೆ ಆರ್ಥಿಕ ಮೌಲ್ಯ ಇಲ್ಲದಿರುವುದೇ ಇದಕ್ಕೆ ಕಾರಣ. ಮನೆಗೆಲಸಕ್ಕಾಗಿ ಆಕೆ ವಿನಿಯೋಗಿಸುವ ಶ್ರಮ ‘ಅಗೋಚರ’ವಾಗಿಯೇ ಉಳಿದಿದೆ. ಈ ಶ್ರಮವನ್ನು ಗುರುತಿಸುವ ಕೆಲಸ ಆಗಬೇಕು ಎಂಬಂತಹ ಚಿಂತನೆ ಈಗ ಕೇಂದ್ರ ಸರ್ಕಾರದ ಮಟ್ಟದಲ್ಲಿ ಚಾಲನೆಗೆ ಬಂದಿದ್ದು ಚರ್ಚೆಗಳಿಗೆ ನಾಂದಿಯಾಗಿದೆ.

ಮೊದಲಿಗೆ ಗೃಹಿಣಿಯರ ಗೃಹಕೃತ್ಯಗಳನ್ನು ಲೆಕ್ಕಹಾಕಬೇಕು; ಈ ಗೃಹಕೃತ್ಯಗಳಿಗಾಗಿ ಗಂಡಂದಿರು ತಮ್ಮ ವೇತನದಲ್ಲಿ ಒಂದಿಷ್ಟು ಪಾಲನ್ನು ಹೆಂಡತಿಗೆ ನೀಡುವಂತಾಗಬೇಕು ಎಂಬಂತಹ ವಿಚಾರವನ್ನು ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವಾಲಯ ಮಂಡಿಸಿದೆ. ಇದಿನ್ನೂ ಪರಿಕಲ್ಪನೆಯ ಮಟ್ಟದಲ್ಲಿದೆ. ‘ಮನೆ ಮನೆಯಲಿ ದೀಪವುರಿಸಿ, ಹೊತ್ತುಹೊತ್ತಿಗೆ ಅನ್ನವುಣಿಸಿ, ತಂದೆ ಮಗುವ ತಬ್ಬಿದಾಕೆ, ನಿನಗೆ ಬೇರೆ ಹೆಸರು ಬೇಕೆ, ಸ್ತ್ರೀ ಎಂದರೆ ಅಷ್ಟೇ ಸಾಕೆ’ ಎಂದು ತಮ್ಮ ಕವನವೊಂದರಲ್ಲಿ ಕೇಳಿದ್ದರು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು. ‘ಹೌದು ಬೇರೆ ಹೆಸರು ಬೇಕು’ ಎಂದು ಕೇಳುತ್ತಿದ್ದಾರೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಕೃಷ್ಣಾ ತೀರಥ್. ‘ಗೃಹಿಣಿಯರು ತಮ್ಮನ್ನು ತಾವು ‘ಗೃಹ ಎಂಜಿನಿಯರ್’ಗಳು’ ಎಂದು ಕರೆದುಕೊಳ್ಳಬೇಕು. ಗೃಹಿಣಿಯರ ಶ್ರಮವನ್ನೂ ಲೆಕ್ಕ ಹಾಕ ತೊಡಗಿದರೆ ಅದು ನಮ್ಮ ಆರ್ಥಿಕ ವೃದ್ಧಿದರಕ್ಕೆ ಸೇರುತ್ತದೆ. ಪ್ರತಿಯಾಗಿ ಗೃಹಿಣಿಯರು ಸಾಮಾಜಿಕವಾಗಿ ಸಶಕ್ತರಾಗುತ್ತಾರೆ. ಸಂಬಂಧಿಸಿದವರೆಲ್ಲರ ಜೊತೆ ಸಮಾಲೋಚಿಸಿದ ನಂತರ ಕರಡು ನೀತಿ ರೂಪಿಸಲಾಗುವುದು’ ಎಂದಿದ್ದಾರೆ ಸಚಿವೆ.

ಈ ಪರಿಕಲ್ಪನೆ ಎಷ್ಟರ ಮಟ್ಟಿಗೆ ವಾಸ್ತವಿಕ? ಇದು ಕಾರ್ಯಸಾಧುವೆ? ಎಂಬೆಲ್ಲಾ ಪ್ರಶ್ನೆಗಳಂತೂ ಈಗ ಹುಟ್ಟಿಕೊಂಡಿವೆ. ಮನೆಗೆಲಸಕ್ಕಾಗಿ ಗೃಹಿಣಿಯರಿಗೆ ಸಂಬಳ ನೀಡುವುದಿರಲಿ, ತಾನೇ ದುಡಿದ ಸಂಬಳವನ್ನು ಸ್ವಂತ ವಿವೇಚನೆಯಿಂದ ಖರ್ಚು ಮಾಡಲೂ ಸಾಧ್ಯವಿಲ್ಲದ ದುಡಿಯುವ ಮಹಿಳೆಯರು ನಮ್ಮ ನಡುವೆ ಇದ್ದಾರೆ. ಜೊತೆಗೆ ಹೊರಗೆ ದುಡಿದು ಹಣ ಸಂಪಾದಿಸಿ ಮತ್ತೆ ಮನೆಗೆಲಸವನ್ನೂ ನಿಭಾಯಿಸುವ ಬಹು ಕಾರ್ಯ ಪ್ರವೀಣರಾದ ಮಹಿಳೆಯರೂ ನಮ್ಮಲ್ಲಿದ್ದಾರೆ.

ಮನೆಗೆಲಸದ ಆರ್ಥಿಕ ಮೌಲ್ಯವನ್ನು ಅರ್ಥ ಮಾಡಿಕೊಳ್ಳಬೇಕೆಂಬ ಚಿಂತನೆ ಸಕಾಲಿಕ ಹಾಗೂ ಸದುದ್ದೇಶದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇದು ಎರಡು ಅಲುಗಿನ ಕತ್ತಿಯಂತೆ. ನಿಜಕ್ಕೂ ಸಮಸ್ಯೆ ಇರುವುದು ‘ಮನೆಗೆಲಸ’ದ ಕುರಿತಾದ ಭಾವನೆಯಲ್ಲಿ. ಮನೆಗೆಲಸವೆಂಬುದು ಎಂದೆಂದೂ ಮುಗಿಯದ ‘ಬಿಟ್ಟಿ ಚಾಕರಿ’ ಎಂಬುದು ಎಲ್ಲರಿಗೂ ತಿಳಿದ ಸತ್ಯ. ಆದರೆ ಈ ಬಿಟ್ಟಿ ಚಾಕರಿ ಮಹಿಳೆಯದೇ ಕರ್ತವ್ಯ ಎಂಬಂತಹ ಮನೋಭಾವ ಸಮಾಜದಲ್ಲಿ ತೊಲಗಬೇಕಿರುವುದು ಮುಖ್ಯ. ಗಂಡ ಸೌಟು ಹಿಡಿಯುವುದು, ದೋಸೆ ಹಿಟ್ಟು ರುಬ್ಬುವುದು ತಮಾಷೆ, ವ್ಯಂಗ್ಯಗಳಿಗೆ ಗುರಿಯಾಗದ ಆರೋಗ್ಯಕರ ಮನಸ್ಥಿತಿ ಸಮಾಜದಲ್ಲಿ ಮೂಡಬೇಕು. ಮನೆಗೆಲಸವೆಂಬುದು ಅನಿವಾರ್ಯ ಕರ್ಮ. ಇದನ್ನು ಬಾಲ್ಯದಿಂದಲೇ ಹೆಣ್ಣುಮಕ್ಕಳಂತೆ ಗಂಡುಮಕ್ಕಳಿಗೂ ಕಲಿಸಬೇಕು. ‘ಗಂಡು ಮಗ ಪೊರಕೆ ಹಿಡಿಯಬಾರದು’ ಎಂಬಂತಹ ಮನೋಭಾವ ಮೊದಲು ತೊಲಗಬೇಕು. ಹೀಗಾದಾಗ ಮನೆಗೆಲಸದ ಕುರಿತಾಗಿ ಗಂಡಿಗಿರುವ ಅಸ್ಪೃಶ್ಯತಾ ಭಾವ ಮಾಯವಾಗಬಹುದು. ಇಲ್ಲವಾದಲ್ಲಿ ಹೆಣ್ಣುಮಕ್ಕಳೇ ಮನೆಗೆಲಸ ಮಾಡಬೇಕಾದವರು ಎಂಬ ಪರಂಪರಾಗತ ದೃಷ್ಟಿಯನ್ನು ಮತ್ತಷ್ಟು ಗಟ್ಟಿಗೊಳಿಸಿದಂತಾಗುತ್ತದೆ. ವಿಚ್ಛೇದಿತ ಪತ್ನಿಯರಿಗೆ ಜೀವನಾಂಶ ನೀಡಲು ಸತಾಯಿಸುವ ಗಂಡಂದಿರನ್ನು ದಿನನಿತ್ಯ ಕಾಣುತ್ತಿದ್ದೇವೆ. ಈ ಕುರಿತ ಕಾನೂನಿನ ಬೆಂಬಲ ದಕ್ಕಿಸಿಕೊಳ್ಳಲು ಇನ್ನಿಲ್ಲದಂತೆ ಅಸಂಖ್ಯ ಮಹಿಳೆಯರು ಹೋರಾಡುತ್ತಿದ್ದಾರೆ. ಇನ್ನು ಇಂತಹ ‘ಗಂಡಂದಿರು’ ಗೃಹಿಣಿಯರಿಗೆ ವೇತನ ನೀಡುವರೆ?

■ ಸಿ.ಜಿ.ಮಂಜುಳಾ